ಭೋಜನ ವೆಚ್ಚವನ್ನು ಅನುಕ್ರಮವಾಗಿ ಮಾಸಿಕ ರೂ.600/– ರಿಂದ ರೂ.650/–ಕ್ಕೆ ಹಾಗೂ ರೂ.650/– ರಿಂದ ರೂ.750/–ಕ್ಕೆ ಹೆಚ್ಚಿಸಲು ಉದ್ದೇಶಿಸಲಾಗಿದೆ.

ರಾಜೀವ್ ಗಾಂಧಿ ವಿಶ್ವವಿದ್ಯಾನಿಲಯ ಪ್ರಾರಂಭಿಸುವುದು

917 (1425) ಶ್ರೀ ಕೆ. ರಾಜು (ರಾಮನಗರ) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜೀವ್ ಗಾಂಧಿ ವಿಶ್ವವಿದ್ಯಾಲಯವನ್ನು ರಾಮನಗರದಲ್ಲಿ ಇದುವರೆವಿಗೂ ಪ್ರಾರಂಭಿಸದೇ ಇರಲು ಕಾರಣಗಳೇನು;

ಆ) ರಾಜೀವ್ ಗಾಂಧಿ ವಿಶ್ವವಿದ್ಯಾಲಯವನ್ನು ಶೀಘ್ರವಾಗಿ ಪ್ರಾಂಭಿಸುವುದರಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಲಭಿಸುವುದಿಲ್ಲವೇ;

ಇ) ಹಾಗಿದ್ದಲ್ಲಿ, ವಿಳಂಬಕ್ಕೆ ಕಾರಣಗಳೇನು?

ಶ್ರೀ ರಾಮಚಂದ್ರಗೌಡ (ವೈದ್ಯಕೀಯ ಶಿಕ್ಷಣ ಸಚಿವರು) :

ಅ) ಭೂ ಸ್ವಾಧೀನ ಪ್ರಕ್ರಿಯೆ ಪೂರ್ಣಗೊಳ್ಳದಿರುವುದು.

ಆ) ಲಭಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಬೆಂಗಳೂರು ನಗರದಲ್ಲಿ ಬಸ್ ದಿನಾಚರಣೆ

918 (406) ಶ್ರೀ ರಾಮಲಿಂಗಾರೆಡ್ಡಿ (ಬಿ.ಟಿ.ಎಂ. ಲೇಔಟ್) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಪ್ರತಿ ತಿಂಗಳು ಒಂದು ದಿನ ಬಸ್ ದಿನಾಚರಣೆ ಆಚರಿಸಲಾಗುತ್ತಿದೆಯೇ;

ಆ) ಹಾಗಿದ್ದಲ್ಲಿ, ಪ್ರತಿ ತಿಂಗಳು ಯಾವ ದಿನಾಂಕದಂದು ಆಚರಿಸಲಾಗುವುದು;

ಇ) ಈ ಬಸ್ ದಿನಾಚರಣೆ ಆಚರಿಸುವ ಉದ್ದೇಶವೇನು;

ಈ) ಈ ಬಸ್ ದಿನಾಚರಣೆಯಂದು ಎಲ್ಲಾ ಸರ್ಕಾರಿ ಅಧಿಕಾರಿಗಳು, ನೌಕರರು ಹಾಗೂ ಮಾಹಿತಿ ತಂತ್ರಜ್ಞಾನ ಸಂಸ್ಥೆಗಳು ಸಿಬ್ಬಂದಿ ಕಡ್ಡಾಯವಾಗಿ ಬಸ್‌ಗಳಲ್ಲಿ ಸಂಚರಿಸುವ ನಿಯಮ ಹಾಕಲಾಗಿದೆಯೇ;

ಉ) ಈ ಬಸ್ ದಿನಾಚರಣೆಯ ದಿನ ಹೆಚ್ಚು ಬಸ್‌ಗಳನ್ನು ಓಡಿಸಲಾಗುವುದೇ, ದರವನ್ನು ಕಡಿತಗೊಳಿಸಲಾಗಿದೆಯೇ;

ಊ) ತಿಂಗಳಿಗೆ ಎರಡು ಸಲ ಈ ಬಸ್ ದಿನಾಚರಣೆ ಆಚರಿಸುವ ಉದ್ದೇಶವಿದೆಯೇ?

ಶ್ರೀ ಆರ್. ಅಶೋಕ್ (ಸಾರಿಗೆ ಸಚಿವರು) :

ಅ) ಹೌದು.

ಆ) ಪ್ರತಿ ತಿಂಗಳು 4ನೇ ದಿನಾಂಕದಂದು ಆಚರಿಸಲಾಗುವುದು. ಒಂದು ವೇಳೆ 4ನೇ ದಿನಾಂಕವು ಭಾನುವಾರ ಅಥವಾ ರಜಾ ದಿನವಾಗಿದ್ದಲ್ಲಿ ಮರುದಿನ ಬಸ್ ದಿನವನ್ನು ಆಚರಿಸಲಾಗುವುದು.

ಇ) ಈ ಬಸ್ ದಿನಾಚರಣೆಯ ಮೂಲ ಉದ್ದೇಶ ವೈಯಕ್ತಿಕ ಸಾರಿಗೆಯ ಬಳಕೆದಾರರಿಗೆ ಸಾರ್ವಜನಿಕ ಸಾರಿಗೆ ಬಳಕೆಯ ಉಪಯುಕ್ತತೆಯ ಬಗ್ಗೆ ಜಾಗೃತಿ ಮೂಡಿಸುವುದು.

ಈ ಬಸ್ ದಿನ ಆಚರಣೆಯಿಂದ ಆಗಿರುವ ತಕ್ಷಣದ ಪ್ರಯೋಜನ ಗಳೆಂದರೆ ವಾಯುಮಾಲಿನ್ಯ ಮಟ್ಟವು ಕಡಿಮೆಯಾಗಿರುವುದು ಮತ್ತು ಬಸ್ ದಿನ ಆಚರಿಸಿದ ವಲಯಗಳಲ್ಲಿ ವೈಯಕ್ತಿಕ ವಾಹನಗಳ ಬಳಕೆ ಕಡಿಮೆಯಾಗಿ ರುವುದರಿಂದ ಸಂಚಾರ ದಟ್ಟಣೆ ಕಡಿಮೆಯಾಗಿರುತ್ತದೆ. ದೀರ್ಘಾವಧಿ ಮತ್ತು ಪರಿಗಣಿಸಲಾರ್ಹ ಪ್ರಯೋಜನವೆಂದರೆ ಸಾರ್ವಜನಿಕ ಸಾರಿಗೆಯ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಿರುವುದು.

ಈ) ಬೆಂಮಸಾಸಂಸ್ಥೆಯ ಸಮೂಹ ಮಾಧ್ಯಮ ಹಾಗೂ ಬಿತ್ತಿಪತ್ರಗಳ ಮೂಲಕ ಸಾರ್ವಜನಿಕರಿಗೆ ಬಸ್ ದಿನಚರಣೆಯ ದಿನ ಬೆಂಮಸಾಸಂಸ್ಥೆಯ ಬಸ್ಸುಗಳಲ್ಲಿ ಪ್ರಯಾಣಿಸುವಂತೆ ಮನವಿ ಮಾಡಲಾಗಿ ರುತ್ತದೆ. ಅಲ್ಲದೇ ಸದರಿ ದಿನದಂದು ಬೆಂಮಸಾಸಂಸ್ಥೆಯ ಎಲ್ಲಾ ಅಧಿಕಾರಿ/ಸಿಬ್ಬಂದಿ ವರ್ಗದವರು ಕಡ್ಡಾಯವಾಗಿ ಬಸ್‌ಗಳಲ್ಲಿಯೇ ಸಂಚರಿಸಲು ಆದೇಶ ಹೊರಡಿಸಲಾಗಿರುತ್ತದೆ ಮತ್ತು ಪಾಲಿಸಲಾಗಿರುತ್ತದೆ.

ಉ) ಬಸ್ ದಿನಾಚರಣೆಯ ದಿನ ಸಂಸ್ಥೆಯು ಹೆಚ್ಚುವರಿ ಬಸ್ಸುಗಳನ್ನು ಆಚರಣೆ ಮಾಡಿರುತ್ತದೆ. ಆದರೆ ದರಗಳನ್ನು ಕಡಿತಗೊಳಿಸ ಲಾಗುವುದಿಲ್ಲ.

ಊ) ಇಲ್ಲ.